ನಿಮ್ಮ ಖಾತರಿ ಪತ್ರಾಗಳಾಗಿದ್ದರೆ, ತಾವು ಸ್ಪಷ್ಟವಾಗಿ ಬಗ್ಗೆ ಹೇಳಿರಿ, ವಿಷಯವನ್ನು ನಮ್ಮ ಇಲಾಖೆಯ ಅಧಿಕಾರಿಗಳ ಮುಖಾಂತರ ತರಿಸಿಕೊಂಡು ಅಲ್ಲಿ ಕನ್ನಡ ಮಾಧ್ಯಮವನ್ನು (1)ರಿಂದ 4ನೇ ತರಗತಿಯವರೆಗೆ ಮಾಡಿಸಿದ್ದಾರೆ ಎಂದು ಹೇಳಿದ್ದರಿಂದಲೇ ಸರ್ಕಾರದವವು ಅನುಮತಿ ಕೊಡುವುದು. ಇದರಲ್ಲಿ ಅಂಥ ಪತ್ರಾಗಳೇನಾದರೂ ಆಗಿದ್ದರೆ, ತಾವು ಈಗಾಗಲೇ ಒಂದು ಶಾಲೆಯ ಪಸರನ್ನು ಹೇಳಿದ್ದೀರಿ, ಅದರ ಬಗ್ಗೆ ಪರಿಶೀಲನೆ ಮಾಡಿ ನೋಡಿ ಅಲ್ಲಿ ಏನಾದರೂ ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಪಡುತ್ತೇವೆ. ನಮ್ಮ ಆಧಿಪತ್ಯದಲ್ಲಿ (1) ರಿಂದ 4ನೇ ತರಗತಿಯವರೆಗೆ ಕನ್ನಡ ಅಥವಾ ಮಾತೃಭಾಷೆ ಇಲ್ಲದೇ ಇರತಕ್ಕಂಥ ಯಾವುದೇ ಶಾಲೆಗೆ ಆಂಗ್ಲ ಮಾಧ್ಯಮಕ್ಕೆ ಅನುಮತಿಯನ್ನು ಸರ್ಕಾರದಿಂದ ಕೊಟ್ಟಿಲ್ಲ. ಒಂದು ವೇಳೆ ಇದರಲ್ಲಿ ಏನಾದರೂ ವ್ಯತ್ಯಾಸಗಳಾಗಿದ್ದರೆ ದಯವಿಟ್ಟು ನಮ್ಮ ಅವಗಾಹನೆಗೆ ತಂದರೆ ಕೂಡಲೇ ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡುತ್ತೇವೆ.

ರಾಜ್ಯದ ಅಂತಕಾಲಿಕ ಉಪನ್ಯಾಸಕರು

152 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಲಸ ಮಾಡುತ್ತಿರುವ ಅಂತಕಾಲಿಕ ಉಪನ್ಯಾಸಕರುಗಳ ಸಂಖ್ಯೆ ಎಷ್ಟು, (ವಿವಿಧ ವರ್ಗಗಳ ಬಗ್ಗೆ ಪ್ರತ್ಯೇಕ ವಿವರ ನೀಡುವುದು)

ಆ) ರಾಜ್ಯದ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಲಸ ಮಾಡುತ್ತಿರುವ ಅಂತಕಾಲಿಕ ಉಪನ್ಯಾಸಕರುಗಳನ್ನು ಖಾಯಂಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಇ) ಈ ಉಪನ್ಯಾಸಕರುಗಳನ್ನು ಖಾಯಂಗೊಳಿಸುವಾಗ ರೋಸ್ಟರ್ ಪದ್ಧತಿ ಅಳವಡಿಸಲಾಗಿದೆಯೇ ಸಾಕಷ್ಟು ಸಂಖ್ಯೆಯಲ್ಲಿ ಪ.ಜಾ./ಪ.ಪ. ಅಭ್ಯರ್ಥಿಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) (i) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಲಸ ಮಾಡುತ್ತಿರುವ ಅರೆಕಾಲಿಕ ಉಪನ್ಯಾಸಕರುಗಳ ಸಂಖ್ಯೆ : 2366.

(ii) ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಕಲಸ ಮಾಡುತ್ತಿರುವ ಅರೆಕಾಲಿಕ ಉಪನ್ಯಾಸಕರ ಸಂಖ್ಯೆ : 2334

(ವಿವರಗಳನ್ನು ಪ್ರತ್ಯೇಕವಾಗಿ ಲಗತ್ತಿಸಿದೆ. ಅನುಬಂಧ-1 ಮತ್ತು 2)

ಆ) ಇದೆ.

೨) ಆರಕ್ಷಕ ಉಪನಿರೀಕ್ಷಕರ ನೇಮಕಾತಿಯನ್ನು ಮಾಡುವಾಗ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ಇಲ್ಲದಿದ್ದ ಸಂದರ್ಭದಲ್ಲಿ ಅಂತಹ ಹುದ್ದೆಗಳನ್ನು 'ಬ್ಯಾಕ್ ಲಾಗ್' ಎಂದು ಪರಿಗಣಿಸಿ ಮುಂಬಡ್ತಿ/ವಿಶೇಷ ನೇಮಕಾತಿ ಮೂಲಕ ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

ಅನುಬಂಧ - I

ವಿಧಾನ ಸಭಾ ಸದಸ್ಯರಾದ ಶ್ರೀ ಜಿ.ಎಸ್. ಯಡಿಯೂರಪ್ಪ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. 587 'ಅ' ವಿಧಾನಕ್ಕೆ ಉತ್ತರ.

ಕ್ರ.ಸಂ.	ವಿಷಯ	ಸೇವೆ ಸಲ್ಲಿಸಿದವರ ಸಂಖ್ಯೆ
1	2	3
1.	ಇಂಗ್ಲೀಷ್	199
2.	ಕನ್ನಡ	280
3.	ಹಿಂದಿ	62
4.	ಸಂಸ್ಕೃತ	23
5.	ಉರ್ದು	30
6.	ಅರೇಬಿಕ್	02
7.	ತಮಿಳು	04
8.	ತೆಲುಗು	04
9.	ಇತಿಹಾಸ	282
10.	ಅರ್ಥಶಾಸ್ತ್ರ	333
11.	ಸಮಾಜಶಾಸ್ತ್ರ	140
12.	ರಾಜ್ಯಶಾಸ್ತ್ರ	235
13.	ಭೂಗೋಳಶಾಸ್ತ್ರ	26
14.	ತತ್ವಶಾಸ್ತ್ರ	09
15.	ಮನಃಶಾಸ್ತ್ರ	14
16.	ಗ್ರಾಮೀಣಾಭಿವೃದ್ಧಿ	01

1	2	3
17.	ಪಾಠಾಧ್ಯಾಪಕ	15
18.	ಭೌತಶಾಸ್ತ್ರ	103
19.	ರಸಾಯನಶಾಸ್ತ್ರ	102
20.	ಗಣಿತಶಾಸ್ತ್ರ	33
21.	ಸಂಖ್ಯಾಶಾಸ್ತ್ರ	05
22.	ಸಸ್ಯಶಾಸ್ತ್ರ	40
23.	ಪ್ರಾಣಿಶಾಸ್ತ್ರ	50
24.	ರೇಷ್ಮೆ ಕೃಷಿ	10
25.	ಭೂಗರ್ಭಶಾಸ್ತ್ರ	01
26.	ಎಲಕ್ಟ್ರೋನಿಕ್ಸ	12
27.	ಗೃಹವಿಜ್ಞಾನ	35
28.	ಗಾರ್ಡನ್ ವಿಜ್ಞಾನ	11
29.	ವೈಕ್ಯೂಮ್ ಬಯಾಲಜಿ	04
30.	ಸಹಕಾರ	01
	ಒಟ್ಟು	**2366**

ಅನುಬಂಧ - 2

ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ವಿಷಯವಾರು ವಿವರಗಳು

1.	ಅರಾಬಿಕ್	02	26.	ಇಂಡಿಸ್ಟ್ರೀಯಲ್	02
2.	ಲೆಕ್ಕ ಪರಿಶೋಧನೆ	02	27.	ಕನ್ನಡ	177
3.	ಜೀವಶಾಸ್ತ್ರ	03	28.	ಕಾನೂನು	30
4.	ಸಸ್ಯಶಾಸ್ತ್ರ	97	29.	ಮಲಯಾಳಂ	02
5.	ವ್ಯವಹಾರ ಕಾನೂನು	06	30.	ಮರಾಠಿ	07
6.	ಬಿಸಿನೆಸ್ ಮ್ಯಾನೇಜಮೆಂಟ್	04	31.	ಗಣಿತಶಾಸ್ತ್ರ	104
7.	ರಸಾಯನಶಾಸ್ತ್ರ	138	32.	ಮರ್ಕಾಂಟೈಲ್	34
8.	ವಾಣಿಜ್ಯ ಶಾಸ್ತ್ರ	187	33.	ಸಂಗೀತ	19
9.	ಕಾಮರ್ಸ ಅಂಡ್ ಅಕೌಂಟ್ಸ್	14	34.	ಆಫೀಸ್ ಮ್ಯಾನೇಜಮೆಂಟ್	01
10.	ಕಮರ್ಶಿಯಲ್ ಲಾ	79	35.	ತತ್ವಶಾಸ್ತ್ರ	03
11.	ಗಣಕ ವಿಜ್ಞಾನ	05	36.	ಭೌತಶಾಸ್ತ್ರ	153
12.	ಕಾಸ್ಟಿಂಗ್ ಅಂಡ್ ಬ್ಯಾಂಕಿಂಗ್	02	37.	ರಾಜ್ಯಶಾಸ್ತ್ರ	114
13.	ಅರ್ಥಶಾಸ್ತ್ರ	129	38.	ಮನಃಶಾಸ್ತ್ರ	21
14.	ಎಜುಕೇಷನ್	26	39.	ಗ್ರಾಮೀಣಾಭಿವೃದ್ಧಿ	04
15.	ಎಲೆಕ್ಟ್ರಾನಿಕ್ಸ್	15	40.	ಸಂಸ್ಕೃತ	56
16.	ಇಂಜಿನಿಯರಿಂಗ್	03	41.	ಸೆಕ್ರೇಟರಿಯಲ್ ಪ್ರಾಕ್ಟೀಸ್	01
17.	ಇಂಗ್ಲೀಷ್	219	42.	ರೇಷ್ಮೆ	03
18.	ಫೈನಾನ್ಶಿಯಲ್ ಮ್ಯಾನೇಜಮೆಂಟ್	01	43.	ಸಮಾಜ ಸೇವ	23
19.	ಫೈನ್ ಆರ್ಟ್ಸ್	04	44.	ಸಮಾಜಶಾಸ್ತ್ರ	123
20.	ಫ್ರೆಂಚ್	02	45.	ಸಂಖ್ಯಾಶಾಸ್ತ್ರ	45
21.	ಭೂಗೋಳಶಾಸ್ತ್ರ	51	46.	ತಮಿಳು	02
22.	ಹಿಂದಿ	125	47.	ತೆಲುಗು	01
23.	ಇತಿಹಾಸ	162	48.	ಫಿಯಾಲಾಜಿ	01
24.	ಗೃಹ ವಿಜ್ಞಾನ	07	49.	ಉರ್ದು	17
25.	ಆದಾಯ ತೆರಿಗೆ	07	50.	ಪ್ರಾಣಿಶಾಸ್ತ್ರ	122
				ಒಟ್ಟು	**2334**

ಶ್ರೀ ಜಿ.ಎಸ್. ಯುಧಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಸರ್ಕಾರೀ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಲಸ ಮಾಡುತ್ತಿರುವ ಅರೆಕಾಲಿಕ ಉಪನ್ಯಾಸಕರುಗಳ ಸಂಖ್ಯೆ 2366 ಎಂದು ಇದೆ. ಇದಲ್ಲದೇ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಕಲಸ ಮಾಡುತ್ತಿರುವ ಅರೆಕಾಲಿಕ ಉಪನ್ಯಾಸಕರ ಸಂಖ್ಯೆ 2334 ಎಂದು ಹೇಳಿದ್ದಾರೆ. ನನಗೆ ತಿಳಿದಿರುವ ಪ್ರಕಾರ ಕ್ಯಾಶುವಲ್ ಲೇಬರ್ಸ್‌ನ ತೆಗೆದುಕೊಂಡು ಇವರನ್ನು ಖಾಯಂ ಮಾಡಬೇಕು ಎಂದು ಮಾಡಿದ್ದೀರಿ, ಆದಕಾರಣ ದಯವಿಟ್ಟು ಯಾರ್ಯಾರನ್ನು ಖಾಯಂ ಮಾಡುತ್ತೀರಿ ಮತ್ತು ಎಷ್ಟು ಮಂದಿಗಳನ್ನು ಖಾಯಂ ಮಾಡುತ್ತೀರಿ ಎನ್ನುವ ಬಗ್ಗೆ ಮತ್ತು ಎರಡನೆಯದಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗಗಳಿಗೆ ಸೇರಬೇಕಾದಂಥ ಮಂದಿಗಳನ್ನು ಎಂದು ವಿಶೇಷವಾದಂಥ ಎಂದು ಪ್ರೈಮ್ ಏನಾದರೂ ತೆಗೆದುಕೊಂಡು ಅವರನ್ನು ಫಿಟ್ ಮಾಡುವಂಥ ಪ್ರಾಮಾಣಿಕ ಪ್ರಯತ್ನವನ್ನು ತಾವೇನಾದರೂ ಮಾಡುತ್ತೀರೋ?

ಶ್ರೀ ಮಂಜುನಾಥ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಇದು ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿದೆ ಮತ್ತು ಇದಕ್ಕೆ ನಿಯಮಾವಳಿಗಳನ್ನು ರಚನೆ ಮಾಡುತ್ತಿದ್ದೇವೆ. ಸರ್ಕಾರೀ ಕಾಲೇಜುಗಳಲ್ಲಿ 960 ಜನರನ್ನು ರೆಗ್ಯುಲರೈಸ್ ಮಾಡುತ್ತಿದ್ದೇವೆ, ಖಾಸಗೀ ಕಾಲೇಜುಗಳಲ್ಲಿ 710 ಜನರನ್ನು ರೆಗ್ಯುಲರೈಸ್ ಮಾಡುತ್ತಿದ್ದೇವೆ. ನಿಯಮಾವಳಿಗಳ ರಚನೆ ಆಗುತ್ತಿದೆ, ಏಕೆಂದರೆ ಇದು ಡಿ.ಪಿ.ಎ.ಆರ್. ಗೆ ಹೋಗಬೇಕು ಮತ್ತು ಕಾನೂನು ಇಲಾಖೆಗೆ ಹೋಗಬೇಕಾಗಿರುತ್ತದೆ, ಆದಕಾರಣ ಇದನ್ನು ಅದಷ್ಟು ಜಾಗ್ರತೆ ಮಾಡಿಸುತ್ತೇವೆ. ಇದಲ್ಲದೇ ನಾನು ಈಗಾಗಲೇ ಕ್ಯಾಬಿನೆಟ್‌ನಲ್ಲಿ ಸೂಚಿಸಿರುವ ಪ್ರಕಾರ ಆರ್ಟಿಕಲ್ 16(4) ಪ್ರಕಾರ ಹಿಂದಿನ ಮೀಸಲಾತಿಯನ್ನು ಅನುಸರಿಸಿ ಮತ್ತು ಅವರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಶೇಕಷ್ಟು ಸಂಖ್ಯೆಯಲ್ಲಿ ಇದಾರೆ ಅನ್ನುವುದನ್ನು ಇದೆ ಪಕ್ಕದಲ್ಲಿ ವಿಶೇಷ ನೇಮಕಾತಿಯನ್ನು ಮಾಡಬೇಕು ಎಂದು ಸೂಚಿಸಿ ಅದಕ್ಕೆ ಒಪ್ಪಿಗೆ ಪಡೆದಿದೆ.

ಶ್ರೀ ಜಿ.ಎಸ್. ಯುಧಿಯೂರಪ್ಪ : ಅಧ್ಯಕ್ಷರೇ, ತಮ್ಮಲ್ಲಿ ನನ್ನ ಏನಂತಿ ಅನಿಸಂದರೆ, ಅಗತ್ಯ ಇದೆ ಎಂದು ಹೇಳಿಯೇ ಈ ಅರೆಕಾಲಿಕ ಉಪನ್ಯಾಸಕರುಗಳು ಅಲ್ಲಿ ಕಲಸ ಮಾಡುತ್ತಿರುವುದು. ದಯವಿಟ್ಟು ತಾವು ಈ ತರಹ ಕ್ಯಾಶುವಲ್ ಲೇಬರ್ಸ್ ತೆಗೆದುಕೊಳ್ಳುವಂಥ ಕಾಲದಲ್ಲಿ ಯಾರು ಈ ರೀತಿಯಲ್ಲಿ ಸರ್ಕಾರೀ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2366 ಜನರು ಅರೆಕಾಲಿಕ ಉಪನ್ಯಾಸಕರುಗಳಿದ್ದಾರೆ ಮತ್ತು ಖಾಸಗೀ ಅನುದಾನಿತ ಕಾಲೇಜುಗಳಲ್ಲಿ 2334 ಜನ ಉಪನ್ಯಾಸಕರುಗಳಿದ್ದಾರೆ ಇವರೆಲ್ಲರನ್ನೂ ಒಂದೇ ಸಾರಿ ಖಾಯಂ ಮಾಡಿದರೆ ಬಹುಶಃ ಅವರು ತಮ್ಮ ಕಾಲ ಮೇಲೆ ನಿಂತುಕೊಂಡು ಪ್ರಾಮಾಣಿಕವಾಗಿ ಆ ಕ್ಷೇತ್ರದಲ್ಲಿ ಸೇವೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದು ನನ್ನ ಮೊದಲನೆಯ ಏನಂತಿ. ಇನ್ನು ಎರಡನೆಯದಾಗಿ ತಾವು ಈ ವಿಷಯದಲ್ಲಿ ತಪ್ಪು ತಿಳಿದುಕೊಳ್ಳಬೇಡಿ, ನಾನು ಬಂದಿರುವಂಥ ಮಿತ್ರ ಮಾಧ್ಯಮದ ಪ್ರಕಾರ ಬಳಿದವರಿಗೂ ಕೂಡ ಖಾಯಂ ಮಾಡಿಸುತ್ತೀರ ಎಂದು ಹೇಳಿ ಬಿಬ್ಬೊಬ್ಬರ ಹತ್ತಿರ 25,000 ರೂ.ಗಳನ್ನು ವಸೂಲು ಮಾಡಿರುವ ಒಂದೆರಡು ಮೂರು ಉದಾಹರಣೆ ನನ್ನ ಗಮನಕ್ಕೆ ಬಂದಿದೆ, ಸಾಮಾನ್ಯವಾಗಿ ಇಂಥ ವ್ಯಕ್ತಿಗಳು ಎಲ್ಲಾ ಕಾಲದಲ್ಲಿಯೂ ಇರುತ್ತಾರೆ. ಆದಕಾರಣ ದಯವಿಟ್ಟು ಒಂದೇ ಸಾರಿ ನಿಶ್ಚಿತವಾದ ಕಾರ್ಯಕ್ರಮವನ್ನು ಫಿಕ್ಸ್ ಮಾ

ಮಾಡಿದರೆ ಅವರು ಬೇರೆಯವರ ಕೈಗೆ ಸಿಕ್ಕಿ ಬಲಿಪಶುಗಳಾಗುವಂಥ ಸಂದರ್ಭ ತಪ್ಪಬಹುದು. ಆದ್ದರಿಂದ ದಯವಿಟ್ಟು ಎಲ್ಲರನ್ನೂ ಖಾಯಂ ಮಾಡಿ ಮತ್ತು ಏರಿಯಾವಾರು ಈ ರೀತಿಯ ದಂಧೆ ಯಾರಾದರೂ ಮಾಡುತ್ತಿದ್ದರೆ ತಮ್ಮ ಗಮನಕ್ಕೆ ಬಂದರೆ ಅದನ್ನು ಬಿಗಿ ಮಾಡಿ ಅದಕ್ಕೆ ಅವಕಾಶ ಕೊಡಬೇಡಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಯಾವ ವಿಚಾರ ನೀವು ಹೇಳಿದ್ದು, ದಯವಿಟ್ಟು ಕ್ಷಮಿಸಿ, ನಾನು ಈ ಕಡೆ ಬಿಡುತ್ತಿದ್ದೆ, ಏನೋ ಹೇಳಿದಿರಲ್ಲಾ.

ಶ್ರೀ ಜಿ.ಎಸ್. ಯಡಿಯೂರಪ್ಪ : ಈ ಮುದ್ದಗಳನ್ನು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿ ಕೆಲವರನ್ನು ಖಾಯಂ ಮಾಡಿಬೇಕೆಂದಿದ್ದಾರೆ. ಸನ್ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಸರ್ಕಾರಿ ಕಾಲೇಜುಗಳಲ್ಲಿರತಕ್ಕಂಥವರಲ್ಲಿ 960 ಜನರನ್ನು ಮತ್ತು ಖಾಸಗೀ ಕಾಲೇಜುಗಳಲ್ಲಿರತಕ್ಕಂಥವರಲ್ಲಿ 710 ಜನರನ್ನು ಖಾಯಂ ಮಾಡುತ್ತೇವೆಂದರು. ಈ ರೀತಿಯಾದಾಗ ಇವರಲ್ಲಿ ಇನ್ನೂ ಅನೇಕ ಜನರು ಉಳಿಯುತ್ತಾರೆ. ಇವರ ಹತ್ತಿರ ಕೆಲವನ್ನು ಖಾಯಂ ಮಾಡಿಸಿಕೊಡುತ್ತೇವೆಂದು ಒಬ್ಬೊಬ್ಬರ ಹತ್ತಿರ 25,000 ರೂ.ಗಳನ್ನು ವಸೂಲು ಮಾಡುತ್ತಿರುವ ಬಗ್ಗೆ ಅನೇಕ ಕಡೆ ನನಗೆ ದೂರು ಬಂದಿದ್ದುಂಟು. ಕೊನೆಪಕ್ಷ ನನಗೆ ಬಂದು ಹೇಳಿದ್ದಾರೆ. ನನ್ನ ಹತ್ತಿರ ಹೆಸರೂ ಕೂಡ ಇದೆ, ಯಾರೋ ಒಬ್ಬ ಅಧಿಕಾರಿಯ ಹೆಸರು ಇದೆ, ನಾನು ಈ ಸ್ಥಾನದಲ್ಲಿ ನಿಂತುಕೊಂಡು ಆ ಹೆಸರನ್ನು ಹೇಳುವುದಕ್ಕೆ ಸಿದ್ಧನಿಲ್ಲ. ಅದಕ್ಕೋಸ್ಕರ ನಾನು ನಿಮ್ಮಲ್ಲಿ ಏನಂತ ಮಾಡುವುದೇನೆಂದರೆ ಈ ಸೇವೆ ಅಗತ್ಯವಿರುವುದರಿಂದ ಒಂದು ಸಾರಿ ರೋಸ್ಟರ್‌ಗೆ ಎಫೆಕ್ಟ್ ಆಗದೇ ಇರುವಂಥ ಉಳಿದಂಥವರು ಯಾರಿದ್ದಾರೆ ಅವರನ್ನು ಖಾಯಂ ಮಾಡಿಬಿಟ್ಟರೆ ಒಳ್ಳೆಯದಲ್ಲವಾ? ಇನ್ನಷ್ಟು ದಿವಸ ಅವರು ಜೀತದಾಳುಗಳಾಗಿ ಕೆಲಸ ಮಾಡಬೇಕು, ನಿಮ್ಮ ಕಾಲದಲ್ಲಿಯಾದರೂ ಅವರಲ್ಲರನ್ನೂ ಖಾಯಂ ಮಾಡಿ ಮತ್ತು ಈ ಅವ್ಯವಹಾರವನ್ನು ತಡೆಯುವಂಥ ಪ್ರಯತ್ನ ಮಾಡಿ.

ಅಧ್ಯಕ್ಷರು : ನಿಮ್ಮ ಸಲಹೆ ಸಂಯುಕ್ತವಾಗಿದೆ.

ಶ್ರೀ ಡಿ. ಮಂಜುನಾಥ್ : ಮಾನ್ಯ ಅಧ್ಯಕ್ಷರೇ, ಎಲ್ಲರನ್ನೂ ಖಾಯಂ ಮಾಡುವುದು ಕಷ್ಟವಿದೆ. ಏಕೆಂದರೆ ಎಲ್ಲರ ಸಂಖ್ಯೆಯನ್ನು ಲೆಕ್ಕ ಹಾಕಿದರೆ ಸುಮಾರು 4 ಸಾವಿರ ಜನರ ಮೇಲಾಗುತ್ತದೆ. ಆದ್ದರಿಂದ ಇವರೆಲ್ಲರಿಗೂ ವರ್ಕ್‌ಲೋಡ್ ಎಲ್ಲಿದೆ? ಇದನ್ನು ಹೇಗೆ ಮಾಡುವುದಕ್ಕಾಗುತ್ತದೆ? ಇದನ್ನು ಮಾಡುವುದಕ್ಕಾಗುವುದಿಲ್ಲವಾದ ಕಾರಣ ನಾವು ಒಂದು ತೀರ್ಮಾನವನ್ನು ಸಂಪುಟದಲ್ಲಿ ತಗೆದುಕೊಂಡಿದ್ದೇವೆಂದರೆ 31-03-95 ರಿಂದ ಆಚೆಗೆ ಯಾರು ಐದು ವರ್ಷಗಳ ಕಾಲ ಕೆಲಸ ಮಾಡಿದ್ದಾರೋ...

ಅಧ್ಯಕ್ಷರು : ಅಲ್ಲೇ ದೂರುಗಳು ಬಂದಿರುವುದು, ಎಲ್ಲರನ್ನೂ ಮಾಡುವುದಕ್ಕಾಗುವುದಿಲ್ಲ ಗವರ್ನಮೆಂಟ್ ಏನ್ನುವ ವಿಚಾರವನ್ನು ಹೇಳುತ್ತಿದ್ದೀರಿ, ಆ ಹೊಣೆಗಾರಿಕೆಯನ್ನು ಯಾರಿದ್ದೀರಾ...

ಗೊತ್ತಾಗುತ್ತಿಲ್ಲ, ಕೆಲವು ಮೂರ್ಖ ಮನುಷ್ಯರುಗಳು ವರ್ಕ್‌ಟು ರೂಲ್ ಚಾಲ್ತಿ ಮಾಡಿ ಎಂದು ಕೇಳುತ್ತಿದ್ದಾರೆ. ಎಷ್ಟಕಾರಾಂ ಆ ವರ್ಕ್‌ಟೂಡ್ಲೂ ಕಂಪ್ಲೀಟ್.

ಶ್ರೀ ಬಿ. ಮಂಜುನಾಥ್ : ಅಧ್ಯಕ್ಷರೇ, ಅದು ನನಗೆ ಗೊತ್ತಿದೆ, ಮಾನ್ಯ ಸದಸ್ಯರು ಪತ್ರವ ನಾಯಕರಿಗೆ ನಾನು ಹೇಳುವುದಿಷ್ಟೆಂದರೆ, ಕೆಲವು ಕಡೆ ಅನಾವಶ್ಯಕವಾಗಿ ಇದನ್ನು ಮಾಡುತ್ತಿದ್ದಾರೆ. ಆಲ್ಲಿ ವರ್ಕ್‌ಟೂರೂಲ್ ಇಲ್ಲ, ಆಗ ಪ್ರಾಂಶುಪಾಲರಿಗೆ ಸರ್ಕಾರದಿಂದ ಈ ಅಧಿಕಾರವನ್ನು ಕೊಟ್ಟಿರುತ್ತಾರೆ, ಆಲ್ಲಿ ಐದಾರು ಪಿರಿಯಡ್ ಇದ್ದರೂ ಒಬ್ಬ ಅತಿಥಿ ಉಪನ್ಯಾಸಕರು ಐದು ಪಿರಿಯಡ್ ಇದ್ದರೂ ಕೂಡ ಈ ರೀತಿ ಮಾಡಿದ್ದಾರೆ ಇದರ ಜೊತೆಗೆ ಈ ಸಂಖ್ಯೆಯಲ್ಲಿ ಏನಾಗಿದೆಯೆಂದರೆ ಒಬ್ಬರು ಐದು ಕಾಲೇಜಿನಲ್ಲಿ ಮಾಡಿದರೆ ಇನ್ನೊಂದು ಕಾಲೇಜಿನಲ್ಲಿ ಏಕೆ ಮಾಡುತ್ತಿದ್ದಾರೆಯಾದ ಕಾರಣ ಇದು ಸಂಖ್ಯೆಯಲ್ಲಿ ಚಾಲ್ತಿಯಾಗಿದೆ. ಅದನ್ನೂ ಕೂಡ ನಾವು ಪರಿಷ್ಕರಿಸಿದ್ದೇವೆ. ಅದ್ದರಿಂದ ಕೊನೆಗೆ ಐದು ತೀರ್ಮಾನಕ್ಕೆ ಬಂದು ಯಾರು 31-03-1995 ರಿಂದ ಎರಡು ವರ್ಷಗಳ ಕಾಲ ಸತತವಾಗಿ ಕೆಲಸ ಮಾಡಿದ್ದಾರೋ ಅವರನ್ನು ರೆಗ್ಯುಲರೈಸ್ ಮಾಡಬೇಕೆಂದಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವಾಗ ಇವರನ್ನು ಖಾಯಂ ಮಾಡುತ್ತೀರಿ?

ಶ್ರೀ ಬಿ. ಮಂಜುನಾಥ್ : ಜೂನ್ ಒಳಗೆ ಇವರನ್ನು ಖಾಯಂ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಯಾವಾಗ ಮಾಡುತ್ತೀರಿ? ಖಾಯಂ ಮಾಡುವುದಾದರೂ ನಿರ್ದಿಷ್ಟವಾಗಿ ಇಷ್ಟರೊಳಗೆ ಮಾಡುತ್ತೀನಿಯೆಂದು ತಾವು ಹೇಳಬೇಕು.

ಶ್ರೀ ಬಿ. ಮಂಜುನಾಥ್ : ಜೂನ್ ಒಳಗೆ ಮಾಡಿಬಿಡುತ್ತೇವೆ. ಏಕೆಂದರೆ ರೂಲ್ಸ್ ಮಾಡುತ್ತಿದ್ದೇವೆ. ರೂಲ್ಸ್ ಮಾಡಿ ನಿರ್ದಿಷ್ಟ ಕಮಿಟಿಯೊಳಗೆ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮುದ್ದು ತಗೆದುಕೊಂಡಿರುವಂತಹ ನಿರ್ದಿಷ್ಟವಾದ ಕೆಲವು ಅಧಿಕಾರಿಗಳ ಹೆಸರುಗಳ ಪಟ್ಟಿಯನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಸಾಧ್ಯವಾದರೆ ಅದನ್ನು ಪರಿಗಣಿಸಿ.

ಶ್ರೀ ಬಿ. ಮಂಜುನಾಥ್ : ಕಳುಹಿಸಿಕೊಡಿ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೇ, ಕಾಲೇಜಿನಲ್ಲಿ ಪ್ರಾಂಶುಪಾಲರು, ನೇಮಕಾತಿಯನ್ನು ಮನಸೋ ಇಚ್ಛೆ ಮಾಡುತ್ತಿದ್ದಾರೆ ಪರಿಶಿಷ್ಟ ಜಾತಿ ಹಾಗೂ ಪಗ್ರಕ್ಕೆ ಸಂಬಂಧಪಟ್ಟ ಅಭ್ಯರ್ಥಿಗಳು ಹೋದರೂ ಕೂಡ ಅವರಿಗೆ ಜೀರೆ ಅಭ್ಯರ್ಥಿಗಳಿಗೆ ಕೊಟ್ಟಂತಹ ನಿವರ್ತನಗಳು ಇದು. ಇದು ಖಾಯಂ ಆಗಿ ನಡೆಯುತ್ತಿದೆ ಎಂದು. ಇನ್ನು ಮೇಲಾದರೂ ಪಾರ್ಟ್‌ಟೈಂ ಲೆಕ್ಚರರ್ ನೇಮಕ ಮಾಡುವಾಗ ಅದಕ್ಕೂ ಕೂಡ ರೋಸ್ಟರ್‌ನ್ನು ಅನುಸರಿಸಿ ನೇಮಕಾತಿಯನ್ನು ಮಾಡುತ್ತೀರಾ? ವ್ಯಾಕಲಾಗಿ ಮುದ್ದೆಗಳನ್ನು ತುಂಬಿತ್ತೇವೆಂದು ಹೇಳುತ್ತೀರಿ, ಅದನ್ನು ಏಂಥ ಧೋರಣೆಯಾಗಿದ್ದು ಇರುತ್ತೀರಾ? ಅಥವಾ ಖಾಸಗಿಯವರೂ ಇದರ ಜೊತೆಯಲ್ಲಿ ಅಲ್ಲಿ ಇರತಕ್ಕಂಥ ವ್ಯಾಕಲಾಗಿ ಮುದ್ದೆಗಳನ್ನು ತುಂಬಿತಕ್ಕಂಥ ಅವಕಾಶವನ್ನು ಕಿತ್ತಾ ಹಾಕಲಿಸುತ್ತೀರಾ?

ಶ್ರೀ ಡಿ. ಮಂಜುನಾಥ್ : ಇನ್ನು ಮುಂದೆ ಪಾರ್ಟಿಕ್ಲೆ ಲೆಕ್ಕರರ್ರ ಅನ್ನು ಅಪಾಯಿಂಟ್ ಮಾಡಿಕೊಳ್ಳುವ ಪ್ರಶ್ನೆಯು ಬರುವುದಿಲ್ಲ. ಮಾನ್ಯ ಸದಸ್ಯರು ಬ್ಯಾಕಲಾಗ್ ಹುದ್ದೆ ಬಗ್ಗೆ ಹೇಳಿದರು, ಆ ಹುದ್ದೆಗಳನ್ನು ಲೆಕ್ಕ ಹಾಕಿ, ಎಷ್ಟು ಪೋಸ್ಟ್ ಇವೆ ಎನ್ನುವುದನ್ನು ನೋಡಿ ಬಿಟ್ಟು ಅದನ್ನು ಪೀರಿಪ್ ರಿಕ್ರೂಟ್‌ಮೆಂಟ್ ಮಾಡಿಯಾಕು ಎಂದು ತೀರ್ಮಾನ ಮಾಡಿದ್ದೇವೆ. ಅದೇ ತರಹ ಕಾಲೇಜುಗಳಲ್ಲಿ ನೋಟ್ ಹಾಕಿ ಅಲ್ಲಿ ಅದು ತೀರ್ಮಾನವಾಗಿದೆ.

ಶ್ರೀ ಯು.ಟಿ. ಖಾದರ್ : ಮಾನ್ಯ ಅಧ್ಯಕ್ಷರೇ, ಸರ್ಕಾರ ರಾಜ್ಯದ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಅರೆಕಾಲಿಕ ಉಪನ್ಯಾಸಕರ ಮಾಹಿತಿಯನ್ನು ತರಿಸಿಕೊಳ್ಳುವಾಗ 2 ರಿಂದ 7 ವರ್ಷದವರೆಗೂ ಅನೇಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಅದರ ಪ್ರಾರಂಭಾಲರು ಕನಿಷ್ಠ ಒಂದು ವರ್ಷ ಎನ್ನುವ ಮಾಹಿತಿಯನ್ನು ಕಳುಹಿಸಿದ್ದಾರೆ. ಕಳುಹಿಸಿಕೊಟ್ಟಮೇಲೆ ಮಾಹಿತಿ ತಪ್ಪಾಗಿದೆ ಎಂದು ಹೇಳಿದ್ದಾರೆ, ದಯವಿಟ್ಟು ಆ ಒಂದು ಮಾಹಿತಿ ತಪ್ಪಾಗಿದ್ದರೆ ವಿಚಾರ ಮಾಡಿ ಅದನ್ನು ಸರಿ ಮಾಡುವಂತಹ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್ : ಅದನ್ನು ಸರಿ ಮಾಡುತ್ತೇನೆ. ಏಕೆಂದರೆ ನಾವು ತೀರ್ಮಾನ ಮಾಡಿದಮೇಲೆ ವಿಚಾರಿಸಿದಾಗ ಅನೇಕ ಕಡೆ ಅನೇಕ ಪ್ರಾಂಶುಪಾಲರು ಮತ್ತೆ ಎಲ್ಲಾ ಕಡೆಯಿಂದ ಕಳುಹಿಸುವುದಕ್ಕೆ ಪ್ರಾರಂಭ ಮಾಡಿದರು. ಹಾಗೂ ನನಗೆ ಆರ್ಜಿಯನ್ನು ಕೊಟ್ಟರು. ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ನನ್ನನ್ನು ಸಹ ಅನೇಕ ಜನ ಬಂದು ಭೇಟಿ ಮಾಡಿದರು. ನನ್ನ ಹೆಸರು ಬಿಟ್ಟು ಹೋಗಿದೆ ಹೇಳಿದರು ಎಂದು ಆಲ್ಲಿ ಯಾರೋ ಆಫೀಸರ್ ಇದ್ದಾರೆ, ಅವರು ಆಫೀಸರ್ರ ಹೌದೋ ಅಲ್ಲವೋ, ಅವರು ಬಹಳ ದುರಹಂಕಾರ ಮಾಡುತ್ತಿದ್ದಾರೆ ಎಂದು ಕೇಳಿಬರುತ್ತಿದೆ. ಆಲ್ಲಿ ಸುಮ್ಮನೆ ಹೀರೆ ಯಾರಾದರೂ ಬಂದು ಕುಳಿತುಕೊಳ್ಳುತ್ತಾರೋ ಏನೋ. ಯಾರೋ ನನ್ನ ಹೆಸರೇ ಇಟ್ಟುಕೊಂಡಿರುವ ಹಾಗೆ ಇದೆ.

ಶ್ರೀ ಡಿ. ಮಂಜುನಾಥ್ : ಇಲ್ಲ ಅದನ್ನು ಸರಿ ಮಾಡಿಸುತ್ತೇವೆ.

ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು

154 - ಶ್ರೀ ಬಿ.ಪಿ. ಲಿಪಪ್ಪ (ಸಕಲೇಶಪುರ) : ಮಾನ್ಯ ಪಾರ್ಟಾ ಮತ್ತು ಪ್ರವಾರ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ಮತ್ತು ಆಲೂರು ತಾಲ್ಲೂಕಿನಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ, ಎಷ್ಟು ವೈದ್ಯರುಗಳ ಕೊರತೆ ಇದೆ. ಇದನ್ನು ಭರ್ತಿ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?